ಕರ್ನಾಟಕ ಸರ್ಕಾರ

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

**ಮಲ್ಲೇಶ್ವರಂ 6ನೇ ಅಡ್ಡರಸ್ತೆ, ಬೆಂಗಳೂರು-560003.**

**Email Id: sadpiwsection2025@gmail.com**

**ಸಂಖ್ಯೆ:** ಡಬ್ಲ್ಯೂ/ಡಿ.ಪಿ.ಇಡಿ/ಪರೀಕ್ಷಾ ಕಾರ್ಯ/01/2025-26 **ದಿನಾಂಕ: 15.04.2025**

## ಅಧಿಸೂಚನೆ

**ವಿಷಯ:** ಮೇ-2025ರ ಮಾಹೆಯಲ್ಲಿ ನಡೆಯಲಿರುವ ಪ್ರಥಮ ಮತ್ತು ದ್ವಿತೀಯ ವರ್ಷದ ಡಿ.ಪಿ.ಇಡಿ ಪರೀಕ್ಷೆಗೆ ರಾಜ್ಯದ ಸರ್ಕಾರಿ ಡಿ.ಪಿ.ಇಡಿ ಸಂಸ್ಥೆಗಳು ಹಾಗೂ ಎನ್.ಸಿ.ಟಿ.ಇ ಯಿಂದ ಮಾನ್ಯತೆ ಪಡೆದು ಕಾರ್ಯ ನಿರ್ವಹಿಸುತ್ತಿರುವ ಡಿ.ಪಿ.ಇಡಿ ಕಾಲೇಜುಗಳಿಂದ ಪರೀಕ್ಷಾ ಅರ್ಜಿಗಳನ್ನು ಆಹ್ವಾನಿಸಿರುವ ಬಗ್ಗೆ.

**ಉಲ್ಲೇಖ:**1) ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ರವರ ಸುತ್ತೋಲೆ ಸಂಖ್ಯೆ: E-26012/DSERT/DIET/OTH/30/2024; ದಿನಾಂಕ: 18.04.2024.

~**********~

2024-25ನೇ ಶೈಕ್ಷಣಿಕ ಅವಧಿಯ ಪ್ರಥಮ ಮತ್ತು ದ್ವಿತೀಯ ವರ್ಷದ ಡಿ.ಪಿ.ಇಡಿ ಪರೀಕ್ಷೆಯನ್ನು ಉಲ್ಲೇಖಿತ ಪತ್ರದ ವಾರ್ಷಿಕ ಕಾರ್ಯಯೋಜನೆಯಂತೆ ಮೇ-2025ರಲ್ಲಿ ನಡೆಸಬೇಕಿದ್ದು, ಅದರಂತೆ ಪ್ರಥಮ ಮತ್ತು ದ್ವಿತೀಯ ವರ್ಷದ ಡಿ.ಪಿ.ಇಡಿ ಕೋರ್ಸ್‌ನ್ನು ಅಧ್ಯಯನ ಮಾಡುತ್ತಿರುವ ಅಭ್ಯರ್ಥಿಗಳು ಹಾಗೂ ಪುನರಾವರ್ತಿತ ಅಭ್ಯರ್ಥಿಗಳಿಗೆ 2025ನೇ ಸಾಲಿನ ಮೇ ಮಾಹೆಯಲ್ಲಿ ಡಿ.ಪಿ.ಇಡಿ ವಾರ್ಷಿಕ ಪರೀಕ್ಷೆಯನ್ನು ನಡೆಸಲು ತೀರ್ಮಾನಿಸಲಾಗಿದೆ.

1. **ಮಾನ್ಯತೆ/ ಮಾನ್ಯತೆ ನವೀಕರಣದ ದಾಖಲೆಯನ್ನು ಹಾಗೂ ಪರೀಕ್ಷಾ ನೋಂದಣಿ ಶುಲ್ಕ ಪಾವತಿಯ ರಶೀದಿಯನ್ನು Upload ಮಾಡುವುದು:-**

ಎನ್.ಸಿ.ಟಿ.ಇ ಯಿಂದ ಮಾನ್ಯತೆ/ ಮಾನ್ಯತೆಯ ನವೀಕರಣವನ್ನು ಪಡೆದು ನಿಯಮಾನುಸಾರ ಶೈಕ್ಷಣಿಕ ಚಟುವಟಿಕೆಗಳನ್ನು ನಿರ್ವಹಿಸುತ್ತಿರುವ ಅನುದಾನಿತ ಮತ್ತು ಅನುದಾನರಹಿತ/ಖಾಸಗಿ ಡಿ.ಪಿ.ಇಡಿ ಕಾಲೇಜುಗಳು ಮಾನ್ಯತೆ/ ಮಾನ್ಯತೆ ನವೀಕರಣದ ದಾಖಲೆಯನ್ನು ಮಂಡಲಿಯ ಜಾಲತಾಣದ ಮೂಲಕ Upload ಮಾಡುವುದು ಮತ್ತು 2025ನೇ ಸಾಲಿನಲ್ಲಿ ಡಿ.ಪಿ.ಇಡಿ ಪರೀಕ್ಷೆಗಾಗಿ ನೋಂದಾಯಿತರಾಗಲು ಸರ್ಕಾರಿ, ಅನುದಾನಿತ, ಅನುದಾನ ರಹಿತ/ ಖಾಸಗಿ ಡಿ.ಪಿ.ಇಡಿ ಕಾಲೇಜುಗಳು, ಪರೀಕ್ಷಾ ನೋಂದಣಿ ಶುಲ್ಕ ರೂ. 1300/- ಗಳನ್ನು ಮಂಡಲಿಗೆ ಆನ್‌ಲೈನ್ ಮೂಲಕ ಪಾವತಿಸುವುದು ಕಡ್ಡಾಯವಾಗಿರುತ್ತದೆ.

ಡಿ.ಪಿ.ಇಡಿ ಸಂಸ್ಥೆಯ ಮಾನ್ಯತೆ/ ಮಾನ್ಯತೆ ನವೀಕರಣದ ದಾಖಲೆ ಹಾಗೂ ನೋಂದಣಿ ಶುಲ್ಕದ ಪಾವತಿಯ ನಂತರ ಜನರೇಟ್ ಆಗುವ ಆನ್‌ಲೈನ್ ರಶೀದಿಯ (Transaction Status: S/ Successful ಎಂದು ನಮೂದಿರುವ) ಸ್ಕ್ಯಾನ್ ಪ್ರತಿಯನ್ನು ಮಂಡಲಿಯ ಜಾಲತಾಣ https://kseab.karnataka.gov.in ಮೂಲಕ PDF ನಮೂನೆಯಲ್ಲಿ ಗಾತ್ರ 1.MB ಯನ್ನು ಮೀರದಂತೆ Upload ಮಾಡುವುದು (kseab.karnataka.gov.in →Other Exams portal → D.P.Ed Examination→ Institute Login→ RR copy Upload) ಡಿ.ಪಿ.ಇಡಿ ಸಂಸ್ಥೆಯವರು Upload ಮಾಡಿರುವ ದಾಖಲೆಗಳನ್ನು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯು (ಡಯಟ್) ಅನುಮೋದಿಸಿದ ನಂತರದಲ್ಲಿ, ಸಂಸ್ಥೆಯ Institute Login ನಲ್ಲಿ ಆನ್‌ಲೈನ್ ಮೂಲಕ ಅಭ್ಯರ್ಥಿಗಳ ಪರೀಕ್ಷಾ ಅರ್ಜಿ ಸಲ್ಲಿಕೆಗಾಗಿ ಇರುವ ಆಯ್ಕೆಯನ್ನು ಸಕ್ರಿಯಗೊಳಿಸಲಾಗುವುದು.

PDF Scanner ACE Scanner

## 2. ಪರೀಕ್ಷಾ ಶುಲ್ಕದ ವಿವರ:-

| ಕ್ರ.ಸಂ. | ಪರೀಕ್ಷಾ ವಿಷಯಗಳ / ಅಭ್ಯರ್ಥಿಗಳ ವಿವರ | ಪಾವತಿಸಬೇಕಾದ ಪರೀಕ್ಷಾ ಶುಲ್ಕ |
|---|---|---|
| 1. | a) ಡಿ.ಪಿ.ಇಡಿ. ಪ್ರಥಮ ವರ್ಷದ ಕೋರ್ಸ್ ಪರೀಕ್ಷೆಯನ್ನು ಮೊದಲ ಬಾರಿಗೆ ತೆಗೆದು ಕೊಳ್ಳುವ ಅಭ್ಯರ್ಥಿಗಳು. | 1160 |
| | b) ಡಿ.ಪಿ.ಇಡಿ. ಪ್ರಥಮ ವರ್ಷದ ಕೋರ್ಸ್‌ನ ಎಲ್ಲಾ 1,2,3 ಭಾಗಗಳ ಪರೀಕ್ಷೆಯನ್ನು ತೆಗೆದುಕೊಳ್ಳುವ ಪುನರಾವರ್ತಿತ ಅಭ್ಯರ್ಥಿಗಳು. | 1215 |
| 2 | a) ಡಿ.ಪಿ.ಇಡಿ. ದ್ವಿತೀಯ ವರ್ಷದ ಕೋರ್ಸ್ ಪರೀಕ್ಷೆಯನ್ನು ಮೊದಲ ಬಾರಿಗೆ ತೆಗೆದುಕೊಳ್ಳುವ ಅಭ್ಯರ್ಥಿಗಳು. | 1200 |
| | b) ಡಿ.ಪಿ.ಇಡಿ. ದ್ವಿತೀಯ ವರ್ಷದ ಕೋರ್ಸ್‌ನ ಎಲ್ಲಾ 1,2,3 ಭಾಗಗಳ ಪರೀಕ್ಷೆಯನ್ನು ತೆಗೆದುಕೊಳ್ಳುವ ಪುನರಾವರ್ತಿತ ಅಭ್ಯರ್ಥಿಗಳು. | 1255 |
| 3 | ಭಾಗ-1ರ ತಾತ್ವಿಕ ಪರೀಕ್ಷೆಯನ್ನು ಮಾತ್ರ ತೆಗೆದುಕೊಳ್ಳುವ ಅಭ್ಯರ್ಥಿಗಳು. (ತಲಾ ಒಂದು ವಿಷಯಕ್ಕೆ) | 300 |
| 4 | ಭಾಗ-1ರ ಆಂತರಿಕ ಪರೀಕ್ಷೆಯನ್ನು ಮಾತ್ರ ತೆಗೆದುಕೊಳ್ಳುವ ಅಭ್ಯರ್ಥಿಗಳು. | 300 |
| 5 | ಭಾಗ-2ರ ಸ್ಕಿಲ್ಸ್ ಪರೀಕ್ಷೆಯನ್ನು ಮಾತ್ರ ತೆಗೆದುಕೊಳ್ಳುವ ಅಭ್ಯರ್ಥಿಗಳು. | 300 |
| 6 | ಭಾಗ-3ರ ಟೀಚಿಂಗ್ ಮತ್ತು ಅಫಿಶಿಯೇಟಿಂಗ್ ಪರೀಕ್ಷೆಯನ್ನು ಮಾತ್ರ ತೆಗೆದುಕೊಳ್ಳಲಿರುವ ಅಭ್ಯರ್ಥಿಗಳು. | 300 |

**(ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ಅಭ್ಯರ್ಥಿಗಳು ಸಹ ಪರೀಕ್ಷಾಶುಲ್ಕ, ಪಾವತಿಸಿ ಸಮಾಜ ಕಲ್ಯಾಣ ಇಲಾಖೆಯಿಂದ ಮರುಪಾವತಿ ಪಡೆಯುವುದು).**

## 3. ಪರೀಕ್ಷಾ ಶುಲ್ಕ ಪಾವತಿಸುವ ವಿಧಾನ:-

- ಅಭ್ಯರ್ಥಿಗಳ ಪರೀಕ್ಷಾ ಅರ್ಜಿಗಳನ್ನು ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲರು/ ಮುಖ್ಯಸ್ಥರು ಮಂಡಲಿಯ ಜಾಲತಾಣದಲ್ಲಿ, ತಮ್ಮ ಸಂಸ್ಥೆಯ Institute Login ಮೂಲಕ ನಿಗದಿಪಡಿಸಿದ ದಿನಾಂಕದೊಳಗೆ ಅರ್ಜಿ ಸಲ್ಲಿಸಬೇಕು, ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪೂರ್ಣಗೊಂಡ ಅರ್ಜಿಗಳು ಡಯಟ್‌ನಿಂದ ಅನುಮೋದನೆಯಾದ ನಂತರ ಸಂಸ್ಥೆವಾರು ಪರೀಕ್ಷಾ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸಲು ವ್ಯವಸ್ಥೆ ಮಾಡಲಾಗಿದೆ.
- ಪರೀಕ್ಷಾ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸುವ ವ್ಯವಸ್ಥೆ ಮಾಡಲಾಗಿದ್ದು, ಡೆಬಿಟ್ ಕಾರ್ಡ್/ ಕ್ರೆಡಿಟ್ ಕಾರ್ಡ್ ಅಥವಾ ನೆಟ್ ಬ್ಯಾಂಕಿಂಗ್ ಬಳಸಿ ಆನ್‌ಲೈನ್ ಮೂಲಕ ಪಾವತಿಸಿ, ಪಾವತಿಸಿರುವ ಬಗ್ಗೆ ಆನ್‌ಲೈನ್ ರಶೀದಿಯ ಪ್ರತಿ, (Transaction Status: S/Successful ಎಂದು ನಮೂದಿರುವ) ನಾಮಯಾದಿ ಪಟ್ಟಿಯನ್ನು ಡಯಟ್ ಪ್ರಾಂಶುಪಾಲರ ಮೂಲಕ ಮಂಡಲಿಗೆ ಸಲ್ಲಿಸಬೇಕು.
- **ಆನ್‌ಲೈನ್ ಪಾವತಿಯನ್ನು ಹೊರತುಪಡಿಸಿ, ಮತ್ತ್ಯಾವುದೇ ಚಲನ್, ಡಿ.ಡಿ, ಚೆಕ್ ಮೂಲಕ ಮಾಡಲಾದ ಪರೀಕ್ಷಾಶುಲ್ಕ / ಇನ್ನಿತರೇ ಶುಲ್ಕಗಳ ಪಾವತಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.**
- **ಅಭ್ಯರ್ಥಿಗಳ ಪರೀಕ್ಷಾಶುಲ್ಕವನ್ನು ಪಾವತಿಸದ್ದಲ್ಲಿ, ಅಂತಹ ಪರೀಕ್ಷಾ ಅರ್ಜಿಗಳನ್ನು ಪರಿಗಣಿಸುವುದಿಲ್ಲ ಹಾಗೂ ಪಾವತಿಸಲಾದ ಪರೀಕ್ಷಾ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.**
- **ಮಂಡಲಿ ನಿಗದಿಪಡಿಸಿದ ಕೊನೆಯ ದಿನಾಂಕಗಳು ಸರ್ಕಾರಿ ರಜಾ ದಿನವೆಂದು ಘೋಷಿಸಲ್ಪಟ್ಟಲ್ಲಿ, ಆ ದಿನದ ಮುಂದಿನ ಕೆಲಸದ ದಿನವನ್ನು ಕೊನೆಯ ದಿನವೆಂದು ಪರಿಗಣಿಸಲಾಗುವುದು.**

PDF Scanner ACE Scanner

4. ಪರೀಕ್ಷಾ ಸಂಬಂಧಿತ ಕಾರ್ಯಗಳಿಗಾಗಿ ನಿಗದಿಗೊಳಿಸಿರುವ ದಿನಾಂಕಗಳ ವಿವರ.

| ಕ್ರ.ಸಂ. | ವಿವರ | ದಿನಾಂಕ |
|---|---|---|
| 01 | ಅಭ್ಯರ್ಥಿಗಳಿಂದ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಬಗ್ಗೆ ಅಧಿಸೂಚನೆ ಪ್ರಕಟಣೆ ದಿನಾಂಕ | 15.04.2025 |
| 02 | ಸಂಸ್ಥೆಯ ಲಾಗಿನ್‌ನಲ್ಲಿ ಮಾನ್ಯತೆ /ಮಾನ್ಯತೆ ನವೀಕರಣ ಪ್ರತಿ ಹಾಗೂ ಪರೀಕ್ಷಾ ನೋಂದಣಿ ಶುಲ್ಕ ಪಾವತಿಸಿರುವ ಆನ್‌ಲೈನ್ ರಶೀದಿಯನ್ನು (Transaction Status) ಅಪ್‌ಲೋಡ್ ಮಾಡುವುದು | 16.04.2025 ರಿಂದ 23.04.2025 |
| 03 | ಮಾನ್ಯತೆ ಪಡೆದ ಡಿ.ಪಿ.ಇಡಿ ಸಂಸ್ಥೆಗಳ ಮಾನ್ಯತೆ ನವೀಕರಣದ ಪ್ರತಿಯನ್ನು ಡಯಟ್ ಹಂತದಲ್ಲಿ ಅನುಮೋದಿಸುವ ದಿನಾಂಕ. | 16.04.2025 ರಿಂದ 23.04.2025 |
| 04 | ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಪ್ರಾರಂಭ ದಿನಾಂಕ | 16.04.2025 |
| 05 | ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ | 24.04.2025 |
| 06 | ಡಯಟ್‌ನಿಂದ ಅರ್ಜಿಗಳನ್ನು ಅನುಮೋದಿಸುವ ದಿನಾಂಕ | 25.04.2025 ರಿಂದ 28.04.2025 |
| 07 | ಆನ್‌ಲೈನ್ ಮೂಲಕ ಪರೀಕ್ಷಾ ಶುಲ್ಕ ಪಾವತಿಸುವ ದಿನಾಂಕ | 25.04.2025 ರಿಂದ 29.04.2025 |
| 08 | ನಾಮಿನಲ್ ರೋಲ್, ಶುಲ್ಕ ಪಾವತಿಸಿರುವ ಆನ್‌ಲೈನ್ ರಶೀದಿಯ (Transaction Status) ಪ್ರತಿ ಹಾಗೂ ಸಂಬಂಧಿಸಿದ ಇತರೆ ದಾಖಲೆಗಳನ್ನು ಡಯಟ್‌ಗೆ, ಸಂಸ್ಥೆಗಳು ಸಲ್ಲಿಸಲು ಕೊನೆಯ ದಿನಾಂಕ | 02.05.2025 |

5. ಅರ್ಜಿಗಳನ್ನು ಸಲ್ಲಿಸಲು ಸಂಸ್ಥೆಯ ಪ್ರಾಂಶುಪಾಲರು/ ಮುಖ್ಯಸ್ಥರು ಪಾಲಿಸಬೇಕಾದ ಸೂಚನೆಗಳು:

- ಡಿ.ಪಿ.ಇಡಿ ಕಾಲೇಜಿನ ಪ್ರಸಕ್ತ ವರ್ಷದ ಮಾನ್ಯತೆ/ ಮಾನ್ಯತೆ ನವೀಕರಣ ಪಡೆದಿರುವುದಕ್ಕೆ ಸಂಬಂಧಿಸಿದ ಪ್ರಾಧಿಕಾರದಿಂದ ಪಡೆದ ಜ್ಞಾಪನ ಪತ್ರದ ಪ್ರತಿ ಹಾಗೂ ಮಂಡಲಿಗೆ ರೂ.1300/-ಗಳ ನೋಂದಣಿ ಶುಲ್ಕ ಪಾವತಿಸಿದ ಆನ್‌ಲೈನ್ ರಶೀದಿಯನ್ನು (Transaction Status: S/Successful ಎಂದಿರುವುದನ್ನು ಖಚಿತಪಡಿಸಿಕೊಳ್ಳುವುದು) PDF ನಮೂನೆಯಲ್ಲಿ (Up to 1 MB Size) ತಮ್ಮ ಸಂಸ್ಥೆಯ Institute Login ಮೂಲಕ Upload ಮಾಡಬೇಕು.ಇದನ್ನು ಸಂಬಂಧಿತ ಡಯಟ್‌ಗಳು ಅನುಮೋದಿಸಿದ ನಂತರವಷ್ಟೇ ಆನ್‌ಲೈನ್ ಮೂಲಕ ಅಭ್ಯರ್ಥಿಗಳ ಪರೀಕ್ಷಾ ಅರ್ಜಿಗಳನ್ನು ಡಿ.ಪಿ.ಇಡಿ ಸಂಸ್ಥೆಯ ಮುಖ್ಯಸ್ಥರು/ ಪ್ರಾಂಶುಪಾಲರು ಸಲ್ಲಿಸಲು ಅವಕಾಶ ಕಲ್ಪಿಸಲಾಗುವುದು.
- ಮೇ-2025 ರ ಡಿ.ಪಿ.ಇಡಿ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳ ನೋಂದಣಿ ಮಾಹಿತಿಯನ್ನೊಳಗೊಂಡ

11/4/25

PDF Scanner ACE Scanner

ಅರ್ಜಿಯನ್ನು ಮಂಡಲಿಯ kseab.karnataka.gov.in ಜಾಲತಾಣದಲ್ಲಿ Other Exams portal → D.P.Ed Examination → Institute Login ಮೂಲಕ ಸಲ್ಲಿಸಲು ಸೂಚಿಸಿದೆ.

- **ಮೊದಲ ಬಾರಿಗೆ ಪರೀಕ್ಷೆ ಬರೆಯುತ್ತಿರುವ ತಮ್ಮ ಸಂಸ್ಥೆಯ** ಅಭ್ಯರ್ಥಿಗಳನ್ನು **RF (Regular Fresh)** ಎಂದು ಪರಿಗಣಿಸಿ, ಅರ್ಜಿಯನ್ನು ಆನ್‌ಲೈನ್ ಮೂಲಕ ಸಲ್ಲಿಸುವುದು, 2003 ಹಾಗೂ 2003ರ ನಂತರದ ವರ್ಷಗಳಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು (ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ) ಉತ್ತೀರ್ಣರಾದ ಅಭ್ಯರ್ಥಿಗಳು ಪ್ರಥಮ ವರ್ಷದ ಡಿ.ಪಿ.ಇಡಿ ಕೋರ್ಸ್ ಪರೀಕ್ಷೆಗೆ ಹಾಜರಾಗುತ್ತಿದ್ದಲ್ಲಿ ಅಂತಹ ಅಭ್ಯರ್ಥಿಗಳ ಅರ್ಜಿಯನ್ನು Institute Login ನಲ್ಲಿ ಅರ್ಜಿ ಸಲ್ಲಿಕೆಗೆ ನೀಡಲಾಗಿರುವ KSEAB/Non-KSEAB ಆಯ್ಕೆಗಳಲ್ಲಿ, KSEABಯನ್ನು ಆಯ್ಕೆಮಾಡಿಕೊಂಡು ಎಸ್.ಎಸ್.ಎಲ್.ಸಿ ನೋಂದಣಿ ಸಂಖ್ಯೆಯನ್ನು ನಮೂದಿಸುವುದು, AUTO FETCH ಆದ ಅಭ್ಯರ್ಥಿಯ ವಿವರಗಳನ್ನು ಹೊರತು ಪಡಿಸಿ ಉಳಿದ ಮಾಹಿತಿಯನ್ನು ಸಂಸ್ಥೆಯ ಪ್ರಾಂಶುಪಾಲರು/ ಮುಖ್ಯಸ್ಥರು ಭರ್ತಿ ಮಾಡುವುದು.
- ಮಾರ್ಚ್ 2002 ಹಾಗೂ ಅದಕ್ಕಿಂತ ಹಿಂದಿನ ವರ್ಷಗಳಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಉತ್ತೀರ್ಣರಾದ ಅಭ್ಯರ್ಥಿಗಳು, ಕೇಂದ್ರ ಪಠ್ಯಕ್ರಮದ ಪರೀಕ್ಷಾ ಮಂಡಳಿಗಳು/ ಬೇರೆ ರಾಜ್ಯಗಳ ಪರೀಕ್ಷಾ ಮಂಡಳಿಗಳು/ ಮುಕ್ತ ಶಾಲಾ ಪರೀಕ್ಷೆಯಡಿಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಪ್ರಥಮ ವರ್ಷದ ಡಿ.ಪಿ.ಇಡಿ ಕೋರ್ಸ್ ಪರೀಕ್ಷೆಗೆ ಹಾಜರಾಗುತ್ತಿದ್ದಲ್ಲಿ ಅಂತಹ ಅಭ್ಯರ್ಥಿಗಳ ಅರ್ಜಿಯನ್ನು Institute Login ನಲ್ಲಿ ಅರ್ಜಿ ಸಲ್ಲಿಕೆಗೆ ನೀಡಲಾಗಿರುವ KSEAB/Non-KSEAB ಆಯ್ಕೆಗಳಲ್ಲಿ, Non-KSEABಯನ್ನು ಆಯ್ಕೆಮಾಡಿಕೊಂಡು ಅರ್ಜಿಯಲ್ಲಿ ಕೇಳಲಾದ ಎಲ್ಲಾ ಮಾಹಿತಿಗಳನ್ನು ನಮೂದಿಸುವುದು,
- ಪುನರಾವರ್ತಿತ ಅಭ್ಯರ್ಥಿ **RR (Regular Repeater)** ಗಳಿಗೆ ಸಂಬಂಧಿಸಿದಂತೆ, 2021ನೇ ಸಾಲಿನಲ್ಲಿ ಪ್ರಥಮ ವರ್ಷ ಹಾಗೂ 2022ನೇ ಸಾಲಿನಲ್ಲಿ ದ್ವಿತೀಯ ವರ್ಷ ಡಿ.ಪಿ.ಇಡಿ ಪರೀಕ್ಷೆ ಹಾಗೂ ನಂತರದ ವರ್ಷಗಳಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳು ಮೇ–2025ರ ಪರೀಕ್ಷೆಗೆ ಹಾಜರಾಗುತ್ತಿದ್ದಲ್ಲಿ ಅಂತಹ ಅಭ್ಯರ್ಥಿಯನ್ನು **ಪುನರಾವರ್ತಿತ ಅಭ್ಯರ್ಥಿ RR (Regular Repeater)** ಎಂದು ಪರಿಗಣಿಸಿ ಆನ್‌ಲೈನ್ ಮೂಲಕ ಅಭ್ಯರ್ಥಿಯ ಅರ್ಜಿಯನ್ನು ಸಲ್ಲಿಸುವುದು, (ಪ್ರಯತ್ನಗಳ ಮಿತಿಯನ್ನು ಗಮನಿಸುವುದು)
- ನೇರಭಂಗಿಯಲ್ಲಿರುವ ಪಾಸ್‌ಪೋರ್ಟ್ ಅಳತೆಯ ಅಭ್ಯರ್ಥಿಯ ಭಾವಚಿತ್ರ **(60 ರಿಂದ 80 KB JPEG ನಮೂನೆ)** ಹಾಗೂ ಅಭ್ಯರ್ಥಿಯ ಸಹಿಯನ್ನು **(20 ರಿಂದ 50 KB JPEG ನಮೂನೆ)** ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿರುತ್ತದೆ.
- **ಆನ್‌ಲೈನ್‌ನಲ್ಲಿ ಅಭ್ಯರ್ಥಿಯ ಭಾವಚಿತ್ರ ಹಾಗೂ ಸಹಿಯನ್ನು ಮಾತ್ರ ಸ್ಕ್ಯಾನ್ ಮಾಡಿಕೊಂಡು ಅಪ್‌ಲೋಡ್ ಮಾಡಬೇಕೇ ಹೊರತು ಇಡೀ ಹಾಳೆಯನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡುವಂತಿಲ್ಲ. ಅಭ್ಯರ್ಥಿಯ ಭಾವಚಿತ್ರ White Background ನಲ್ಲಿ ಇರಬೇಕು ಅಥವಾ ಕಪ್ಪು ಬಿಳುಪು ಭಾವಚಿತ್ರವನ್ನೇ ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿರುತ್ತದೆ. ಬೇರೆ ಭಾವಚಿತ್ರಗಳನ್ನು ಅಪ್‌ಲೋಡ್ ಮಾಡಿದಲ್ಲಿ ತಮ್ಮನ್ನೇ ನೇರ ಹೊಣೆಗರರನ್ನಾಗಿ ಮಾಡಲಾಗುವುದು.**
- ದ್ವಿತೀಯ ವರ್ಷದ ಅಭ್ಯರ್ಥಿಗಳ ಭಾವಚಿತ್ರ ಹಾಗೂ ಸಹಿ Autofetch ಆಗುವುದರಿಂದ ಅಪ್‌ಲೋಡ್ ಮಾಡಲು ಅವಕಾಶವಿರುವುದಿಲ್ಲ.
- ಮೇ–2025ರ ಪರೀಕ್ಷೆಗೆ ಹಾಜರಾಗಲು ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳ ಮಾಹಿತಿಯನ್ನು, **Institute Login** ನಲ್ಲಿ ಲಭ್ಯವಿರುವ ನಾಮಯಾದಿ ಪಟ್ಟಿ **(Nominal Roll)** ಯೊಂದಿಗೆ ಪರಿಶೀಲಿಸಿಕೊಂಡು, ಅಭ್ಯರ್ಥಿಗಳ ಮಾಹಿತಿ ಮತ್ತು ಅಭ್ಯರ್ಥಿಗಳ ಸಂಖ್ಯೆಗಳನ್ನು ಅಂತಿಮಗೊಳಿಸುವುದು.
- **ಒಂದು ಸಂಸ್ಥೆಯಿಂದ ಮತ್ತೊಂದು ಸಂಸ್ಥೆಗೆ ವರ್ಗಾವಣೆ ಮುಖಾಂತರ ದ್ವಿತೀಯ ಡಿ.ಪಿ.ಇಡಿ ಅಭ್ಯರ್ಥಿ ದಾಖಲಾಗಿದ್ದರೆ, ಅಂತಹ ಅಭ್ಯರ್ಥಿಯ ಹೆಸರನ್ನು ದ್ವಿತೀಯ ಡಿ.ಪಿ.ಇಡಿ ಚೆಕ್‌ಲಿಸ್ಟ್ ನಾಮಿನಲ್‌ರೋಲ್‌ನಲ್ಲಿ**

11/4/25

PDF Scanner ACE Scanner

ಸೇರ್ಪಡೆ ಮಾಡುವುದು. ಅಲ್ಲದೇ ಯಾವ ಸಂಸ್ಥೆಯಿಂದ ವರ್ಗಾವಣೆ ಹೊಂದಿದ್ದಾರೆ ಎಂಬುದಕ್ಕೆ ಪರಾ ಕಾಲಂನಲ್ಲಿ ಸಂಸ್ಥೆಯ ಸಂಕೇತ ಹೆಸರು ಮತ್ತು ವಿಳಾಸವನ್ನು ನಮೂದಿಸುವುದು. ಈ ಬಗ್ಗೆ ಸಂಬಂಧಿಸಿದ ಪ್ರಾಧಿಕಾರದ ಆದೇಶದ ಪ್ರತಿ ಸಲ್ಲಿಸುವುದು.

- ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪೂರ್ಣಗೊಂಡ ಅರ್ಜಿಗಳು ಡಯಟ್‌ನಿಂದ ಅನುಮೋದನೆಯಾದ ನಂತರ ಜನರೇಟ್ ಆಗುವ ಪರೀಕ್ಷಾ ಶುಲ್ಕವನ್ನು ಆನ್‌ಲೈನ್ ಪೇಮೆಂಟ್ ಮೂಲಕ ಪಾವತಿಸುವುದು.
- ಸಂಸ್ಥೆಯ ಪ್ರಾಂಶುಪಾಲರು/ ಮುಖ್ಯಸ್ಥರು **Institute Login** ನಿಂದ **Download** ಮಾಡಿಕೊಂಡು ಪರಿಶೀಲನೆ ಮಾಡಲಾದ ನಾಮಯಾದಿ ಪಟ್ಟಿಯನ್ನು **(Nominal Roll)**, ಪರೀಕ್ಷಾ ಶುಲ್ಕ ಪಾವತಿಸಿದ ಆನ್‌ಲೈನ್ ರಶೀದಿಯನ್ನು **(Transaction Status: S/Successful** ಎಂದಿರುವುದನ್ನು ಖಚಿತಪಡಿಸಿಕೊಳ್ಳುವುದು) ಡಯಟ್‌ಗೆ ಸಲ್ಲಿಸುವುದು.
- **RF (Regular Fresh)** ಮತ್ತು **RR (Regular Repeater)** ಅಭ್ಯರ್ಥಿಗಳ ಅರ್ಜಿಗಳನ್ನು ಜಿಲ್ಲಾ ಡಯಟ್ ಪ್ರಾಂಶುಪಾಲರು **DIET Login** ನಲ್ಲಿ ಪರಿಶೀಲಿಸಿ ಅನುಮೋದನೆ ಮಾಡುವುದು.
- **ಅರ್ಜಿಗಳನ್ನು ಸಂಸ್ಥೆಯ ಹಂತದಲ್ಲಿ Submit ಮಾಡಿದ ನಂತರ, ತಿದ್ದುಪಡಿ ಮಾಡಬೇಕಾದಲ್ಲಿ ಸಂಬಂಧಿತ ಅರ್ಜಿಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ಒಳಗೆ ಸಂಸ್ಥೆಯ ಲಾಗಿನ್‌ನಲ್ಲಿ ತಿದ್ದುಪಡಿ ಮಾಡಿಕೊಳ್ಳಲು ಅವಕಾಶವನ್ನು ಕಲ್ಪಿಸಲಾಗಿದೆ.**
- ಡಯಟ್‌ನಿಂದ ಅರ್ಜಿಗಳು ಅನುಮೋದನೆಗೊಂಡ ನಂತರದಲ್ಲಿ, ಸಂಸ್ಥೆಯ ಹಂತದಲ್ಲಿ ತಿದ್ದುಪಡಿಗೆ ಅವಕಾಶವಿರುವುದಿಲ್ಲ.
- ಅರ್ಜಿ ಸಲ್ಲಿಸುವಿಕೆ, ಶುಲ್ಕ ಪಾವತಿ, ಡಯಟ್‌ನಿಂದ ಅರ್ಜಿ ಹಾಗೂ ಸಂಬಂಧಿತ ದಾಖಲೆಗಳ ಅನುಮೋದನೆ ಪ್ರಕ್ರಿಯೆ ಮುಕ್ತಾಯವಾದ ನಂತರ ಮಂಡಲಿಯ ಹಂತದಲ್ಲಿ ಪರಿಶೀಲಿಸಿ, ನಿಗದಿತ ದಿನಾಂಕದಂದು ಸಂಸ್ಥೆಯ **Institute Login** ಮೂಲಕ ಅಭ್ಯರ್ಥಿಗಳ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಲಭ್ಯಗೊಳಿಸಲಾಗುವುದು,
- **ಮೊದಲ ಬಾರಿಗೆ ಪರೀಕ್ಷೆಗೆ ಹಾಜರಾಗುತ್ತಿರುವ ಅಭ್ಯರ್ಥಿಗಳ ಹೆಸರು, ಲಿಂಗ, ಮಾಧ್ಯಮ ತಪ್ಪಾಗಿ ನಮೂದಾಗಿ ಡಯಟ್‌ನಿಂದ ಅರ್ಜಿ ಅನುಮೋದನೆಗೊಂಡಿದಲ್ಲಿ, ತಿದ್ದುಪಡಿಗಾಗಿ ಡಯಟ್ ಪ್ರಾಂಶುಪಾಲರ ಮುಖಾಂತರ, ಅರ್ಜಿ/ ಪ್ರವೇಶ ಪತ್ರದ ಪ್ರತಿ, ದೃಢೀಕೃತ ಅಗತ್ಯ ದಾಖಲೆಗಳು ಹಾಗೂ ರೂ.200/-ಗಳ ದಂಡಶುಲ್ಕದ NEFT ಚಲನ್ (ಇತರೆ ಪರೀಕ್ಷೆಗಳು) ಮೂಲಪ್ರತಿಯೊಂದಿಗೆ ಮನವಿಯನ್ನು, ಪ್ರವೇಶಪತ್ರ ಪ್ರಕಟವಾದ 03 ದಿನದ ಒಳಗಾಗಿ, ಮಂಡಲಿಗೆ ಖುದ್ದಾಗಿ/ ಅಂಚೆ ಮುಖಾಂತರ ಸಲ್ಲಿಸುವುದು.**
- ಪತ್ರ ವ್ಯವಹಾರಕ್ಕೆ ಅನುಕೂಲಕರವಾದ ಅಂಚೆ ವಿಳಾಸ, ದೂರವಾಣಿ ಸಂಖ್ಯೆ ಅಥವಾ ಮೊಬೈಲ್ ಫೋನ್ ಸಂಖ್ಯೆ ಹಾಗೂ **E-Mail** ವಿಳಾಸವನ್ನು ತಪ್ಪದೆ ತಿದ್ದುಪಡಿಗಾಗಿ ಕೋರಿರುವ ಮನವಿ ಪತ್ರದಲ್ಲಿ ನಮೂದಿಸುವುದು.
- **ಮಂಡಲಿಯ ಗಮನಕ್ಕೆ ತರದೇ ಅಭ್ಯರ್ಥಿಗಳ ಪರೀಕ್ಷಾ ಕೇಂದ್ರದ ಬದಲಾವಣೆಗೆ ಅವಕಾಶ ಇರುವುದಿಲ್ಲ.**
- ಆನ್‌ಲೈನ್‌ನಲ್ಲಿ ಅಭ್ಯರ್ಥಿಯ ಭಾವಚಿತ್ರ ಮತ್ತು ಸಹಿಯನ್ನು ಅಪ್‌ಲೋಡ್ ಮಾಡುವಾಗ ನೈಜ ಅಭ್ಯರ್ಥಿಯ ಬದಲು ಬೇರೆ ಅಭ್ಯರ್ಥಿಯ ಭಾವಚಿತ್ರ ಮತ್ತು ಸಹಿಯನ್ನು ಅಪ್‌ಲೋಡ್ ಮಾಡಿದರೆ ಅಂತಹ ಸಂಸ್ಥೆಯ ಪ್ರಾಂಶುಪಾಲರ ಮೇಲೆ ನಿಯಮಾನುಸಾರ ಕಠಿಣ ಕ್ರಮ ಜರುಗಿಸಲಾಗುವುದು. ಇಂತಹ ದೋಷಗಳನ್ನು ಪರಿಶೀಲಿಸದೇ, ಖಾತ್ರಿಪಡಿಸಿಕೊಳ್ಳದೆ, ಯಥಾವತ್ತಾಗಿ ಅನುಮೋದಿಸುವ ಜಿಲ್ಲಾ ಡಯಟ್ ಪ್ರಾಂಶುಪಾಲರ ಮೇಲೆ ನಿಯಮಾನುರೀತ್ಯಾ ಕ್ರಮಕೈಗೊಳ್ಳಲಾಗುವುದು.

ಮೇಲಿನ ಎಲ್ಲಾ ನಿಯಮಗಳನ್ನು ಸಂಬಂಧಪಟ್ಟ **ಡಿ.ಪಿ.ಇಡಿ** ಸಂಸ್ಥೆಯ ಪ್ರಾಂಶುಪಾಲರು/ ಮುಖ್ಯಸ್ಥರು ತಪ್ಪದೇ ಪಾಲಿಸಲು ತಿಳಿಸಿದೆ. ನಿಯಮಗಳನ್ನು ಪಾಲಿಸದಿದ್ದಲ್ಲಿ ಮುಂದಿನ ಆಗುಹೋಗುಗಳಿಗೆ ಸಂಸ್ಥೆಯ ಪ್ರಾಂಶುಪಾಲರು / ಮುಖ್ಯಸ್ಥರನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು.

11/4/25

PDF Scanner ACE Scanner

6. ಡಯಟ್‌ನಿಂದ ಡಿ.ಪಿ.ಇಡಿ ಅಭ್ಯರ್ಥಿಗಳ ನಾಮಯಾದಿಪಟ್ಟಿಯ ಅನುಮೋದನೆ:-

ಸರ್ಕಾರಿ ಡಿ.ಪಿ.ಇಡಿ ಸಂಸ್ಥೆಗಳು, ಅನುದಾನಿತ ಹಾಗೂ ಮಾನ್ಯತೆ ಪಡೆದು ಅಸ್ತಿತ್ವದಲ್ಲಿರುವ ಖಾಸಗಿ ಡಿ.ಪಿ.ಇಡಿ ಕಾಲೇಜುಗಳಿಗೆ ಸಂಬಂಧಿಸಿದಂತೆ, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯರವರ ನಿರ್ದೇಶನ ಮತ್ತು ಮಾರ್ಗದರ್ಶನಗಳಂತೆ ಮತ್ತು ಸ್ಪಷ್ಟೀಕರಣಗಳಂತೆ ಸಂಬಂಧಿತ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ (ಡಯಟ್) ಪ್ರಾಂಶುಪಾಲರು ಡಿ.ಪಿ.ಇಡಿ ಅಭ್ಯರ್ಥಿಗಳ ನಾಮಯಾದಿಪಟ್ಟಿಯನ್ನು **(Nominal Roll) Online** ಮೂಲಕ **DIET LOGIN** ನಲ್ಲಿಯೇ ಪರಿಶೀಲಿಸಿ ಅನುಮೋದಿಸುವುದು. ಒಂದು ವೇಳೆ ಅರ್ಜಿಗಳು ತಿರಸ್ಕೃತವಾದಲ್ಲಿ ತಿದ್ದುಪಡಿ ಮಾಡಿಕೊಳ್ಳಲು ಸಂಸ್ಥೆಯ ಅಥವಾ ಡಯಟ್ ಹಂತದಲ್ಲಿ ಅವಕಾಶವಿರುವುದಿಲ್ಲ. ತಿದ್ದುಪಡಿಗೆ ಅಪೇಕ್ಷಿಸಿದಲ್ಲಿ ಸಮರ್ಥನೀಯ ಪೂರಕ ದಾಖಲೆಗಳೊಂದಿಗೆ ಮಂಡಲಿಯನ್ನು ಸಂಪರ್ಕಿಸುವುದು.

7. ಪುನರ್ ದಾಖಲಾತಿ ಹೊಂದಿರುವ ಅಭ್ಯರ್ಥಿಗಳ ಅರ್ಜಿ ಸಲ್ಲಿಸುವ ಬಗ್ಗೆ :-

ದ್ವಿತೀಯ ವರ್ಷದ ಡಿ.ಪಿ.ಇಡಿ ಕೋರ್ಸ್‌ಗೆ ಸಂಬಂಧಿಸಿದಂತೆ, ಮೇ-2025ರ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಜಿಲ್ಲೆಯೊಳಗೆ ಪುನರ್‌ದಾಖಲಾತಿಯಾಗಿದ್ದಲ್ಲಿ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ (ಡಯಟ್) ಪ್ರಾಂಶುಪಾಲರ ಜ್ಞಾಪನ ಆದೇಶವಿರಬೇಕು. ಅಂತರ್‌ಜಿಲ್ಲಾ ಪುನರ್ ದಾಖಲಾತಿಯಾಗಿದ್ದಲ್ಲಿ ನಿರ್ದೇಶಕರು, **ಡಿ.ಎಸ್.ಇ.ಆರ್.ಟಿ** ರವರಿಂದ ಅನುಮತಿ ಪಡೆದಿರುವ ಜ್ಞಾಪನ ಆದೇಶವಿರಬೇಕು. ದ್ವಿತೀಯ ವರ್ಷದ **ಡಿ.ಪಿ.ಇಡಿ** ಕೋರ್ಸ್‌ಗೆ ಪುನರ್ ದಾಖಲಾತಿ ಹೊಂದುವ ಅಭ್ಯರ್ಥಿಗಳು ಪರಿಷ್ಕೃತ ಪಠ್ಯವಸ್ತುವಿನಂತೆ **(Revised Syllabus)** ಪರೀಕ್ಷೆ ಬರೆಯಬೇಕು. **ವರ್ಗಾವಣೆ ಅಥವಾ ಪುನರ್‌ದಾಖಲಾತಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಡಯಟ್ ಪ್ರಾಂಶುಪಾಲರ ಹಂತದಲ್ಲಿಯೇ ಪರಿಶೀಲಿಸಿ ಅನುಮೋದಿಸುವುದು.** ಅನುಮೋದನೆಗೊಂಡ ಪುನರ್‌ದಾಖಲಾತಿ ಅಭ್ಯರ್ಥಿಗಳ ಮಾಹಿತಿಯನ್ನು ಮಂಡಲಿಗೆ ನಿಗದಿತ ದಿನಾಂಕದೊಳಗೆ ಸಲ್ಲಿಸಿದಲ್ಲಿ ಸಂಬಂಧಿಸಿದ **ಅಭ್ಯರ್ಥಿಯ ಅರ್ಜಿಯನ್ನು ಮಂಡಲಿಯಿಂದ Online ನಲ್ಲಿ Upload ಮಾಡಲಾಗುವುದು.**

8. ಐಚ್ಛಿಕ ವಿಷಯದ ಆಯ್ಕೆ:-

ಐಚ್ಛಿಕ ವಿಷಯಗಳ ಆಯ್ಕೆಯಲ್ಲಿ ಅಭ್ಯರ್ಥಿಯು ಒಂದು ಐಚ್ಛಿಕ ವಿಷಯವನ್ನು ಮಾತ್ರ ಆಯ್ಕೆ ಮಾಡಬೇಕು. ಹೀಗೆ ಆಯ್ಕೆ ಮಾಡುವಾಗ ತಪ್ಪಾಗಿ ಆಯ್ಕೆ ಮಾಡಿದರೆ ತಿದ್ದುಪಡಿಗೆ ಅವಕಾಶವಿರುವುದಿಲ್ಲ.

9. ಹಾಜರಾತಿ ವಿನಾಯಿತಿ ಬಗ್ಗೆ:-

ಪ್ರಥಮ ಮತ್ತು ದ್ವಿತೀಯ ಡಿ.ಪಿ.ಇಡಿ ಹೊಸ ಅಭ್ಯರ್ಥಿಗಳ ಶೈಕ್ಷಣಿಕ ವರ್ಷದ ಒಟ್ಟು ಕೆಲಸದ ದಿನಗಳಲ್ಲಿ ಕನಿಷ್ಠ ಶೇಕಡ 80.ರಷ್ಟು ಹಾಜರಾತಿ ಇರುವುದು ಕಡ್ಡಾಯ. ಶೇಕಡ80.ರಷ್ಟು ಹಾಜರಾತಿ ಇಲ್ಲದ ಅಭ್ಯರ್ಥಿಗಳು ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಿರುವುದಿಲ್ಲ. ವಿಶೇಷ ಸಂದರ್ಭಗಳಲ್ಲಿ ಶೇ.10ರಷ್ಟು ವಿನಾಯಿತಿಯನ್ನು ನೀಡಲು ಸಂಸ್ಥೆಯ ಪ್ರಾಂಶುಪಾಲರಿಗೆ ಅವಕಾಶವಿದೆ ಹಾಗೂ ಮಂಡಲಿಯು ಹೆಚ್ಚುವರಿಯಾಗಿ ಶೇ.05ರಷ್ಟು ಗೈರುಹಾಜರಿಯನ್ನು ಮನ್ನಾ ಮಾಡುತ್ತದೆ. ಅಂದರೆ, ಸಂಸ್ಥೆಯ ಪ್ರಾಂಶುಪಾಲರು ನೀಡುವ ಶೇ.10ರ ವಿನಾಯಿತಿ ನಂತರ ಶೇ.05ರಷ್ಟು ಹಾಜರಾತಿ ವಿನಾಯಿತಿಯನ್ನು ಮಂಡಲಿಯು ಮನ್ನಾ ಮಾಡುತ್ತದೆ. ಅಂತಹ ಪ್ರಕರಣಗಳ ಬಗ್ಗೆ ಸಂಸ್ಥೆಯ ಪ್ರಾಂಶುಪಾಲರು ಆಯಾ ಡಯಟ್ ಪ್ರಾಂಶುಪಾಲರ ಮುಖಾಂತರ ಸೂಕ್ತ ದಾಖಲೆ ಹಾಗೂ ವಿವರಣೆಗಳೊಂದಿಗೆ ಮಂಡಲಿಗೆ ಪ್ರಸ್ತಾವನೆ ಸಲ್ಲಿಸಿ ಸಾಕಷ್ಟು ಮುಂಚಿತವಾಗಿ ಮಂಡಲಿಯ ಅನುಮತಿ ಪಡೆಯುವುದು.

10. ಫಲಿತಾಂಶ ಉತ್ತಮಪಡಿಸಿಕೊಳ್ಳಲು ಅನುಮತಿ ನೀಡುವ ಬಗ್ಗೆ:-

**ಪ್ರಥಮ**/ **ದ್ವಿತೀಯ** ವರ್ಷದ **ಡಿ.ಪಿ.ಇಡಿ** ಕೋರ್ಸ್‌ಗಳ ಫಲಿತಾಂಶವನ್ನು ಉತ್ತಮ ಪಡಿಸಿಕೊಳ್ಳಲು ಬಯಸುವ ಅಭ್ಯರ್ಥಿಗಳು ಮಂಡಲಿಯಿಂದ ಫಲಿತಾಂಶವನ್ನು ಉತ್ತಮ ಪಡಿಸಿಕೊಳ್ಳಲು ಕುರಿತು ಅನುಮತಿಯನ್ನು ಪಡೆದಿರಬೇಕು. ಅನುಮತಿ ಪಡೆದಿರುವ ಆದೇಶದ ಪ್ರತಿಯೊಂದಿಗೆ ಡಯಟ್ ಮುಖಾಂತರ ಮಂಡಲಿಗೆ ಮನವಿಯನ್ನು ಸಲ್ಲಿಸಿದಲ್ಲಿ, ಸಂಬಂಧಿಸಿದ ಸಂಸ್ಥೆಯ Login ನಲ್ಲಿ ಅಭ್ಯರ್ಥಿಗೆ ಮೇ-2025ರ ಪರೀಕ್ಷೆಗಾಗಿ ಅರ್ಜಿಯನ್ನು ಸಲ್ಲಿಸುವ ಅವಕಾಶ ನೀಡಲಾಗುವುದು.

11/4/25

**11. ಪರೀಕ್ಷಾ ಅವ್ಯವಹಾರಗಳಿಂದ ಉಚ್ಛಾಟಿಸಿರುವ (ಎಂ.ಎಲ್.ಪಿ) ಅಭ್ಯರ್ಥಿಗಳ ಪರೀಕ್ಷಾ ಅರ್ಜಿಗಳ ಬಗ್ಗೆ:–**

ಪ್ರಥಮ ಮತ್ತು ದ್ವಿತೀಯ ವರ್ಷದ ಡಿ.ಪಿ.ಇಡಿ ಪರೀಕ್ಷೆಯಲ್ಲಿ ಅವ್ಯವಹಾರಗಳನ್ನು ನಡೆಸಿ ಉಚ್ಛಾಟನೆಗೊಂಡಿರುವ ಅಭ್ಯರ್ಥಿಗಳ ಉಚ್ಛಾಟನಾ ವರ್ಷಗಳ ಅವಧಿ ಮುಕ್ತಾಯಗೊಂಡಿದ್ದಲ್ಲಿ, ಆ ಅಭ್ಯರ್ಥಿಗಳು ಮೇ–2025ನೇ ಸಾಲಿನ ಪರೀಕ್ಷೆ ಬರೆಯಲು ಅರ್ಹರಿದ್ದಲ್ಲಿ, ಎಂ.ಎಲ್.ಪಿ ಪ್ರಕರಣವೆಂದು ಪ್ರತ್ಯೇಕವಾಗಿ ನಾಮಿನಲ್‌ರೋಲ್‌ನ್ನು ನೇರವಾಗಿ ಡಯಟ್ ಮೂಲಕ ಮಂಡಲಿಗೆ ಸಲ್ಲಿಸುವುದು. ಮಂಡಲಿಯಿಂದ ಹೊರಡಿಸಿರುವ ಜ್ಞಾಪನ /ಆದೇಶದ ಪ್ರತಿ ಲಗತ್ತಿಸುವುದು. ಈ ರೀತಿಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಂಡಲಿಯಿಂದ ಪ್ರತ್ಯೇಕವಾಗಿ **Online** ಅರ್ಜಿಯನ್ನು **Upload** ಮಾಡಲಾಗುವುದು.

**12. ಪ್ರಯತ್ನಗಳ ಮಿತಿ:–**

ದ್ವಿತೀಯ ವರ್ಷದ ಡಿ.ಪಿ.ಇಡಿ ಕೋರ್ಸ್ ವ್ಯಾಸಂಗ ಮಾಡಿರುವ ನಂತರದ ವರ್ಷದಿಂದ, ಮೂರು ವರ್ಷಗಳ (ಸತತ ಮೂರು ಪ್ರಯತ್ನದೊಳಗೆ) ಒಳಗೆ ಪ್ರಥಮ ಮತ್ತು ದ್ವಿತೀಯ ವರ್ಷದ ಡಿ.ಪಿ.ಇಡಿ ಪರೀಕ್ಷೆಗಳನ್ನು ತೇರ್ಗಡೆ ಹೊಂದಬೇಕು. ಅದರನ್ವಯ ಪರೀಕ್ಷೆ ತೆಗೆದುಕೊಂಡಿರುವ / ತೆಗೆದುಕೊಳ್ಳುವ ಅಭ್ಯರ್ಥಿಗಳಿಗೆ ಈ ಕೆಳಕಂಡಂತೆ ಅಂತಿಮ ಕಾಲಾವಕಾಶವಾಗುತ್ತದೆ.

**ಡಿ.ಎಸ್.ಇ.ಆರ್.ಟಿ ಯ ಡಿಪ್ಲೊಮೊ ಇನ್ ಫಿಜಿಕಲ್ ಎಜುಕೇಷನ್‌ನ Curriculum & Syllabus 2005ರ ಪುಟ ಸಂಖ್ಯೆ:22 ಕ್ರಮ ಸಂಖ್ಯೆ:7ರಲ್ಲಿ ನಮೂದಿಸಿರುವಂತೆ ಅನುತ್ತೀರ್ಣರಾದ ಡಿ.ಪಿ.ಇಡಿ ಅಭ್ಯರ್ಥಿಗಳಿಗೆ ಉತ್ತೀರ್ಣರಾಗಲು ಪ್ರಯತ್ನಗಳ ಮಿತಿಯನ್ನು ಸತತ ಮೂರು ಪರೀಕ್ಷೆಗಳಿಗೆ ಮಾತ್ರ ಸೀಮಿತಗೊಳಿಸಲಾಗಿದೆ.** ಈ ಮಾಹಿತಿಯನ್ನು ನಿಮ್ಮ ಸಂಸ್ಥೆಯ ಹೊಸ ಮತ್ತು ಪುನರಾವರ್ತಿತ ಅಭ್ಯರ್ಥಿಗಳ ಗಮನಕ್ಕೆ ತರತಕ್ಕದ್ದು. ಅಲ್ಲದೇ ಸಂಸ್ಥೆಯವರು ಅಭ್ಯರ್ಥಿಗಳಿಂದ ಮಾಹಿತಿ ಪಡೆದು ಪರೀಕ್ಷಾ ಅರ್ಜಿ ಸಲ್ಲಿಸುವ ಕುರಿತು ಗಮನ ಹರಿಸದಿದ್ದಲ್ಲಿ, ಸಂಸ್ಥೆಯ ಮುಖ್ಯಸ್ಥರೇ ಜವಾಬ್ದಾರರಾಗಿರುತ್ತಾರೆ. ಈ ವಿಚಾರವನ್ನು ವಿದ್ಯಾರ್ಥಿಗಳ ಮತ್ತು ಪೋಷಕರ ಗಮನಕ್ಕೆ ತಂದು ಅಂತಿಮ ಕಾಲಾವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ಸೂಚಿಸುವುದು. **ಅಂತಿಮ ಕಾಲಾವಕಾಶದ ಬಗ್ಗೆ ಮನದಟ್ಟು ಮಾಡುವುದು. ವ್ಯಾಪಕ ಪ್ರಚಾರ ಮಾಡುವುದು ಆಯಾ ಸಂಸ್ಥೆಯ ಆದ್ಯ ಕರ್ತವ್ಯವಾಗಿರುತ್ತದೆ.**

| ಕ್ರಮ ಸಂಖ್ಯೆ | ದ್ವಿತೀಯ ವರ್ಷ ಡಿ.ಪಿ.ಇಡಿ ಕೋರ್ಸ್ ವ್ಯಾಸಂಗ ಮಾಡಿದ ಶೈಕ್ಷಣಿಕ ವರ್ಷದ ಮುಖ್ಯ ಪರೀಕ್ಷೆ | **ಅಂತಿಮ ಕಾಲಾವಕಾಶ/ ಅಂತಿಮ ಪ್ರಯತ್ನ** |
|---|---|---|
| 01 | ಮೇ–ಜೂನ್ 2022 | ಮೇ–ಜೂನ್ 2025 |
| 02 | ಮೇ–ಜೂನ್ 2023 | ಮೇ–ಜೂನ್ 2026 |

**13. ಪ್ರಥಮ ಡಿ.ಪಿ.ಇಡಿ ಪಠ್ಯಕ್ರಮದನ್ವಯ ಬಾಹ್ಯ ಪರೀಕ್ಷೆಗೆ ವಿಷಯಗಳ ವಿವರ ನಿಗದಿಪಡಿಸಲಾಗಿರುವ ಗರಿಷ್ಠ ಅಂಕಗಳು ಹಾಗೂ ನಿಗದಿಪಡಿಸಿರುವ ಅವಧಿ**

| **ವಿಷಯ** | **ವಿಷಯ ಸಂಕೇತ ಮತ್ತು ಪಠ್ಯವಸ್ತು** | **ಗರಿಷ್ಠ ಅಂಕಗಳು** | **ನಿಗದಿಪಡಿಸಲಾದ ಅವಧಿ** |
|---|---|---|---|
| ದೈಹಿಕ ಶಿಕ್ಷಣದ ತಳಹದಿಗಳು | 101 EK | 80 | 3 ಗಂಟೆ |
| ಶರೀರ ರಚನಾ ಮತ್ತು ಗುಣಧರ್ಮ ಶಾಸ್ತ್ರ | 102 EK | 80 | 3 ಗಂಟೆ |
| ದೈಹಿಕ ಶಿಕ್ಷಣದ ಪಠ್ಯಕ್ರಮ ಸಂವಹನೆ ಮತ್ತು ಶಿಕ್ಷಣ ಶಾಸ್ತ್ರ | 103 EK | 80 | 3 ಗಂಟೆ |
| ಅನ್ವಯಿಕ ದೈಹಿಕ ಶಿಕ್ಷಣ ಮತ್ತು ಯೋಗ | 104 EK | 80 | 3 ಗಂಟೆ |
| ಭಾಷಾ ಸಂಪದೀಕರಣ ಕನ್ನಡ | 105 K | 80 | 3 ಗಂಟೆ |
| ಭಾಷಾ ಸಂಪದೀಕರಣ ಇಂಗ್ಲೀಷ್ | 106 E | | |

11/4/25

14. ದ್ವಿತೀಯ ಡಿ.ಪಿ.ಇಡಿ ಬಾಹ್ಯ ವಿಷಯಗಳ ವಿವರ, ನಿಗದಿಪಡಿಸಲಾಗಿರುವ ಗರಿಷ್ಠ ಅಂಕಗಳು ಹಾಗೂ ನಿಗದಿಪಡಿಸಿರುವ ಅವಧಿ,

| ವಿಷಯ | ವಿಷಯ ಸಂಕೇತ ಮತ್ತು ಪತ್ರವಸ್ತು | ಗರಿಷ್ಠ ಅಂಕಗಳು | ನಿಗದಿಪಡಿಸಲಾದ ಅವಧಿ |
|---|---|---|---|
| ದೈಹಿಕ ಶಿಕ್ಷಣದ ನಿರ್ವಹಣೆ | 201 EK | 80 | 3 ಗಂಟೆ |
| ಆರೋಗ್ಯ ಮತ್ತು ಪರಿಸರ ಶಿಕ್ಷಣ | 202 EK | 80 | 3 ಗಂಟೆ |
| ದೈಹಿಕ ಶಿಕ್ಷಣದಲ್ಲಿ ಶೈಕ್ಷಣಿಕ ಮನೋವಿಜ್ಞಾನ | 203 EK | 80 | 3 ಗಂಟೆ |
| ಕ್ರೀಡಾಧಿಕಾರತ್ವ ಮತ್ತು ಕ್ರೀಡಾ ಶಿಕ್ಷಣದ ತತ್ವಗಳು | 204 EK | 80 | 3 ಗಂಟೆ |
| ವಿಷಯಾಧಾರಿತ ಬೋಧನಾ ಪದ್ಧತಿ ಕನ್ನಡ | 205 K | 80 | 3 ಗಂಟೆ |
| ವಿಷಯಾಧಾರಿತ ಬೋಧನಾ ಪದ್ಧತಿ ಇಂಗ್ಲೀಷ್ | 206 E | | |

15. ಡಯಟ್ ಪ್ರಾಂಶುಪಾಲರು ಹಾಗೂ ನೋಡಲ್ ಅಧಿಕಾರಿಗಳ ಕರ್ತವ್ಯಗಳು ಹಾಗೂ ಗಮನಿಸಬೇಕಾದ ಅಂಶಗಳು:

- ಸರ್ಕಾರಿ, ಅನುದಾನಿತ, ಅನುದಾನರಹಿತ/ ಖಾಸಗಿ ಡಿ.ಪಿ.ಇಡಿ ಕಾಲೇಜಿನವರು ಎನ್.ಸಿ.ಟಿ.ಇ ಯಿಂದ ಶೈಕ್ಷಣಿಕ ವರ್ಷದ ಮಾನ್ಯತೆ/ ಮಾನ್ಯತೆ ನವೀಕರಣ ಪಡೆದಿರುವುದಕ್ಕೆ ಸಂಬಂಧಿಸಿದ ಪ್ರಾಧಿಕಾರದಿಂದ ಪಡೆದ ಜ್ಞಾಪನ ಪತ್ರದ ಪ್ರತಿ ಹಾಗೂ ಮಂಡಲಿಗೆ ರೂ.1300/-ಗಳ ಪರೀಕ್ಷಾ ನೋಂದಣಿ ಶುಲ್ಕ ಪಾವತಿಸಿರುವ ಆನ್‌ಲೈನ್ ರಶೀದಿ (ಆನ್‌ಲೈನ್ ರಶೀದಿಯಲ್ಲಿ Transaction Status: S/Successful ಎಂದಿರಬೇಕು)ಯನ್ನು ಪರಿಶೀಲಿಸಿ ಅನ್‌ಲೈನ್‌ನಲ್ಲಿ ಅನುಮೋದನೆ ನೀಡಬೇಕು, ಎನ್.ಸಿ.ಟಿ.ಇ ಯಿಂದ ಮಾನ್ಯತೆ ಪಡೆಯದ ಅನಧಿಕೃತ ಸಂಸ್ಥೆಗಳ ಅಭ್ಯರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.
- ಡಿ.ಪಿ.ಇಡಿ ಕಾಲೇಜುಗಳ ಮಾನ್ಯತೆಯನ್ನು ಎನ್.ಸಿ.ಟಿ.ಇ ಹಿಂಪಡೆದಿದ್ದಲ್ಲಿ, ಅಂತಹ ಡಿ.ಪಿ.ಇಡಿ ಕಾಲೇಜುಗಳ ಅಭ್ಯರ್ಥಿಗಳು ಪರೀಕ್ಷೆಯನ್ನು ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.
- ಸರ್ಕಾರ ಅಥವಾ ಎನ್.ಸಿ.ಟಿ.ಇ ಯಿಂದ ನಿಗದಿಪಡಿಸಿರುವ ದಾಖಲಾತಿ ಮಿತಿಯೊಳಗೆ ಅಭ್ಯರ್ಥಿಗಳನ್ನು ದಾಖಲಾತಿ ಮಾಡಿಕೊಂಡಿರಬೇಕು.
- ಸರ್ಕಾರ ಮತ್ತು ಎನ್.ಸಿ.ಟಿ.ಇ ಯವರು ಅನುಮತಿ ನೀಡಿರುವ ವಿಳಾಸ ಮತ್ತು ಸ್ಥಳದಲ್ಲಿ ಡಿ.ಪಿ.ಇಡಿ ಕಾಲೇಜು/ ಸಂಸ್ಥೆ ನಡೆಯುತ್ತಿರಬೇಕು. ಸರ್ಕಾರ ಅಥವಾ ಎನ್.ಸಿ.ಟಿ.ಇ ಯವರ ಅನುಮತಿ / ಆದೇಶವಿಲ್ಲದೆ ಸಂಸ್ಥೆಯ ವಿಳಾಸ ಮತ್ತು ಸ್ಥಳ ಬದಲಾವಣೆಗೆ ಅವಕಾಶವಿಲ್ಲ.
- ಸರ್ಕಾರ ಮತ್ತು ಎನ್.ಸಿ.ಟಿ.ಇ ಯಿಂದ ಅನುಮತಿ ನೀಡಲಾಗಿರುವ ಮಾಧ್ಯಮಕ್ಕೆ ಮಾತ್ರ ಡಿ.ಪಿ.ಇಡಿ ಕಾಲೇಜು/ ಸಂಸ್ಥೆಯವರು ಅಭ್ಯರ್ಥಿಗಳನ್ನು ದಾಖಲಿಸಿಕೊಂಡಿರಬೇಕು. ಜಿಲ್ಲಾ ಡಯಟ್ ಪ್ರಾಂಶುಪಾಲರು ಸರ್ಕಾರ ಮತ್ತು ಎನ್.ಸಿ.ಟಿ.ಇ ಯಿಂದ ನೀಡಿರುವ ಮಾಧ್ಯಮಕ್ಕೆ ಮಾತ್ರ ದಾಖಲಾತಿಯನ್ನು ಅನುಮೋದಿಸಿರಬೇಕು.
- ಮಾಧ್ಯಮ ಬದಲಾವಣೆಗೆ ಸರ್ಕಾರದ ಅನುಮತಿಯ ಅಗತ್ಯತೆ ಇದೆ. ಸರ್ಕಾರದ ಅನುಮತಿ ಇಲ್ಲದೇ ಯಾವುದೇ ಡಿ.ಪಿ.ಇಡಿ ಕಾಲೇಜು/ ಸಂಸ್ಥೆ ಮಾಧ್ಯಮ ಬದಲಾವಣೆ ಮಾಡಿಕೊಂಡಿದ್ದಲ್ಲಿ, ಅಂತಹ ಸಂಸ್ಥೆಯ ಅಭ್ಯರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.
- ಕೇಂದ್ರೀಕೃತ ದಾಖಲಾತಿ ಘಟಕದಿಂದ ಸರ್ಕಾರಿ ಕೋಟಾದ ಅಭ್ಯರ್ಥಿಗಳನ್ನು ಹಂಚಿಕೆ ಮಾಡಿರಬೇಕು. ಹಂಚಿಕೆ ಮಾಡಿರುವ ಪಟ್ಟಿಯಲ್ಲಿರುವ ಅಭ್ಯರ್ಥಿಗಳ ಹೆಸರು ಮಾತ್ರ ನಾಮಯಾದಿಪಟ್ಟಿ (Nominal Roll) ಯಲ್ಲಿರಬೇಕು.

11/4/25

ACE Scanner

- ಆಡಳಿತ ಮಂಡಳಿಯ ಕೋಟಾದ ಅಭ್ಯರ್ಥಿಗಳ ದಾಖಲಾತಿಯನ್ನು ಡಯಟ್ ಪ್ರಾಂಶುಪಾಲರು ಅನುಮೋದಿಸಿರಬೇಕು. ಅನುಮೋದಿತ ಪಟ್ಟಿಯಲ್ಲಿನ ಅಭ್ಯರ್ಥಿಗಳ ಹೆಸರು ಮಾತ್ರ, ನಾಮಯಾದಿಪಟ್ಟಿ (Nominal Roll) ಯಲ್ಲಿರಬೇಕು.
- ಆಡಳಿತ ಮಂಡಳಿಯು ಕೇಂದ್ರಿಕೃತ ದಾಖಲಾತಿ ಘಟಕ ಅಥವಾ ಸರ್ಕಾರದಿಂದ ಅನುಮತಿ ಪಡೆದು ಸರ್ಕಾರಿ ಕೋಟಾದ ಉಳಿಕೆ ಸೀಟುಗಳಿಗೆ ದಾಖಲಾತಿ ಮಾಡಿಕೊಂಡಿದ್ದಲ್ಲಿ, ಡಯಟ್ ಪ್ರಾಂಶುಪಾಲರಿಂದ ಅನುಮೋದಿತವಾಗಿರಬೇಕು. ಅನುಮೋದಿತ ಪಟ್ಟಿಯಲ್ಲಿನ ಅಭ್ಯರ್ಥಿಗಳ ಹೆಸರು ಮಾತ್ರ ನಾಮಯಾದಿಪಟ್ಟಿ (Nominal Roll) ಯಲ್ಲಿರಬೇಕು.
- ಆನ್‌ಲೈನ್ ಮೂಲಕ ಅಭ್ಯರ್ಥಿಗಳ ಆಂತರಿಕ ಹಾಗೂ ಪ್ರಾಯೋಗಿಕ ಅಂಕಗಳನ್ನು ಡಯಟ್ ಲಾಗಿನ್‌ನಲ್ಲಿ ಪರಿಶೀಲಿಸಿ, ಅನುಮೋದಿಸುವುದು.
- ಆನ್‌ಲೈನ್ ಮೂಲಕ ಸಲ್ಲಿಸಿದ ಪರೀಕ್ಷಾ ಅರ್ಜಿಗಳನ್ನು ಡಯಟ್ ಲಾಗಿನ್‌ನಲ್ಲಿ ಪರಿಶೀಲಿಸಿ ಅನುಮೋದಿಸುವುದು.
- ಜಿಲ್ಲಾ ಡಯಟ್ ಪ್ರಾಂಶುಪಾಲರಿಂದ ದಾಖಲಾತಿ ಅನುಮೋದನೆಯಾಗದಿರುವ ಅಭ್ಯರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.
- ಡಯಟ್ ಪ್ರಾಂಶುಪಾಲರು ತಮ್ಮ ಜಿಲ್ಲೆಯಲ್ಲಿರುವ ಡಿ.ಪಿ.ಇಡಿ ಕಾಲೇಜುಗಳು ಸಲ್ಲಿಸಿರುವ ನಾಮಯಾದಿ ಪಟ್ಟಿಯನ್ನು ತಮ್ಮ ಹಂತದಲ್ಲಿ ರಕ್ಷಿಸಿಡುವುದು ಹಾಗೂ ಮಂಡಳಿಯು ಕೇಳಿದಾಗ ಅದನ್ನು ಮಂಡಲಿಗೆ ಸಲ್ಲಿಸುವುದು.
- **ಡಯಟ್ ಹಂತದಲ್ಲಿ ಕಾಲೇಜುಗಳಿಂದ ಸ್ವೀಕರಿಸಲಾದ ಪರೀಕ್ಷಾ ನೋಂದಣಿ ಶುಲ್ಕ ಹಾಗೂ ಪರೀಕ್ಷಾ ಶುಲ್ಕದ ಆನ್‌ಲೈನ್ ರಶೀದಿಗಳನ್ನು ಪರಿಶೀಲಿಸಿ (Transaction Status Receipt) ಕ್ರೋಢೀಕರಿಸಿ, ಮಂಡಲಿಗೆ ಕಳುಹಿಸುವುದು.**

**16. ತಿದ್ದುಪಡಿ ಸಂಬಂಧಿತ ಮನವಿ ಸಲ್ಲಿಕೆ:-**

ಅರ್ಜಿ ಸಲ್ಲಿಕೆ ಮುಕ್ತಾಯವಾದ ನಂತರ ಮಂಡಳಿಯ ಹಂತದಲ್ಲಿ ಪರಿಶೀಲಿಸಿ ಸಂಸ್ಥೆಯ Login ಗೆ ಅಭ್ಯರ್ಥಿಗಳ ಪ್ರವೇಶ ಪತ್ರಗಳನ್ನು Upload ಮಾಡಲಾಗುವುದು. ಸಂಸ್ಥೆಯ ಮುಖ್ಯಸ್ಥರು ಅದನ್ನು ಡೌನ್‌ಲೋಡ್ ಮಾಡಿಕೊಂಡು ದೋಷಗಳಿದ್ದಲ್ಲಿ ಡಯಟ್ ಹಂತದಿಂದ ಮನವಿ ಸಲ್ಲಿಸಬೇಕಾಗಿರುವುದರಿಂದ, ದಾಖಲೆಗಳನ್ನು ಪರಿಶೀಲಿಸಿ ಮನವಿಯನ್ನು ಮಂಡಲಿಗೆ ನಿಗದಿತ ದಿನಾಂಕದೊಳಗೆ ಕಳುಹಿಸಿ ಕೊಡುವುದು.

**17. ಆಂತರಿಕ ಮತ್ತು ಪ್ರಾಯೋಗಿಕ ಪರೀಕ್ಷೆಗಳ ಅಂಕಗಳನ್ನು ಸಲ್ಲಿಸುವ ಬಗ್ಗೆ:-**

ಅಭ್ಯರ್ಥಿಗಳು ಪಡೆದ ಆಂತರಿಕ ಮೌಲ್ಯಮಾಪನ ಮತ್ತು ಪ್ರಾಯೋಗಿಕ ಪರೀಕ್ಷೆಗಳ ಅಂಕಗಳನ್ನು ಆನ್‌ಲೈನ್‌ನಲ್ಲಿಯೇ ಭರ್ತಿ ಮಾಡಬೇಕಾಗುತ್ತದೆ. ಇದಕ್ಕಾಗಿ ಹಿಂದಿನ ವರ್ಷಗಳಂತೆ ನಮೂನೆಗಳಲ್ಲಿ ಮಾಹಿತಿ ಸಿದ್ಧಪಡಿಸಿ ಇಟ್ಟುಕೊಳ್ಳುವುದು. ಹಾಗೂ ಸಂಸ್ಥೆಯ Institute Login ನಲ್ಲಿ 'Online Mark Porting' ಮಾಡಲು ಅವಕಾಶ ಕಲ್ಪಿಸಿದಾಗ ಮಾಹಿತಿಗಳನ್ನು ತುಂಬುವುದು.

ಸಂಸ್ಥೆಗಳ ಮುಖ್ಯಸ್ಥರು ಈ ಅಂಕಗಳನ್ನು ಭರ್ತಿ ಮಾಡಿ ಆನ್‌ಲೈನ್‌ನಲ್ಲಿ ಸಲ್ಲಿಸಿದ ನಂತರ ಸಂಬಂಧಿಸಿದ ಡಯಟ್‌ಗೆ ಸಮನ್ವಯ ಸಮಿತಿಯು ನೀಡಿದ ಮೂಲ ದಾಖಲೆಗಳನ್ನು ಸಲ್ಲಿಸಬೇಕು. ಡಯಟ್ ಪ್ರಾಂಶುಪಾಲರು ಸಮನ್ವಯ ಸಮಿತಿಯು ನೀಡಿರುವ ಅಂಕಗಳಿಗೂ ಹಾಗೂ ಸಂಸ್ಥೆಯ ಮುಖ್ಯಸ್ಥರು ಭರ್ತಿ ಮಾಡಿರುವ ಅಂಕಗಳಿಗೂ ತಾಳೆಯಾಗುತ್ತಿರುವುದನ್ನು ಖಚಿತಪಡಿಸಿಕೊಂಡು ಆನ್‌ಲೈನ್‌ನಲ್ಲಿ ಇದನ್ನು ಅನುಮೋದಿಸಬೇಕು. ವ್ಯತ್ಯಾಸವಿದ್ದಲ್ಲಿ ಡಯಟ್ ಪ್ರಾಂಶುಪಾಲರು ಇದನ್ನು ಮಂಡಲಿಯ ಗಮನಕ್ಕೆ ತರುವುದು.

ಒಂದು ವೇಳೆ ವ್ಯತ್ಯಾಸವಾದಲ್ಲಿ ಪ್ರತಿ ದೋಷಕ್ಕೆ ಸಂಸ್ಥೆಯ ಮುಖ್ಯಸ್ಥರಿಗೆ ತಲಾ ರೂ.1000/-ದಂತೆ ದಂಡ ವಿಧಿಸಲಾಗುವುದು. ದಂಡವನ್ನು ಪಾವತಿಸಿ ಡಯಟ್ ಪ್ರಾಂಶುಪಾಲರ ಮುಖಾಂತರ ಮನವಿ ಸಲ್ಲಿಸಿದಲ್ಲಿ

11/4/25

PDF Scanner ACE Scanner

ಸರಿಪಡಿಸುವ ಬಗ್ಗೆ ಕ್ರಮವಹಿಸಲಾಗುವುದು. ಈ ಕುರಿತಂತೆ ಮಾರ್ಗಸೂಚನೆಗಳೊಂದಿಗೆ ಪ್ರತ್ಯೇಕವಾಗಿ ಸುತ್ತೋಲೆಯನ್ನು ಹೊರಡಿಸಲಾಗುವುದು.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿ ಡಯಟ್ ಪ್ರಾಂಶುಪಾಲರು ಹಾಗೂ ಡಿ.ಪಿ.ಇಡಿ ಸಂಸ್ಥೆಯ ಪ್ರಾಂಶುಪಾಲರು/ ಮುಖ್ಯಸ್ಥರು ಅಗತ್ಯ ಕ್ರಮವಹಿಸಲು ತಿಳಿಸಿದೆ.

**ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿಗಳ ವಿವರ:-**

1. ಶ್ರೀ ವಾಗ್ಮೋರೆ ಹನುಮಂತ, ಹಿರಿಯ ಸಹಾಯಕ ನಿರ್ದೇಶಕರು, ಡಿ.ಪಿ.ಇಡಿ ಶಾಖೆ, ಮೊಬೈಲ್ ಸಂಖ್ಯೆ:8310548093.

11/11/2025

[ಗೋಪಾಲಕೃಷ್ಣ ಹೆಚ್.ಎನ್]
ನಿರ್ದೇಶಕರು (ಪರೀಕ್ಷೆಗಳು)

**ಪ್ರತಿಗಳು :-**

1. ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಅಧ್ಯಕ್ಷರು, ಕ.ಶಾ.ಪ.ಮೌ.ಮಂಡಲಿ ರವರ ಆಪ್ತಶಾಖೆಗೆ
3. ಕಾರ್ಯದರ್ಶಿಗಳು ಕ.ಶಾ.ಪ.ಮೌ.ಮಂಡಲಿ ರವರ ಆಪ್ತ ಶಾಖೆಗೆ.
4. ರಾಜ್ಯದ ಎಲ್ಲಾ ವಿಭಾಗೀಯ ಮಟ್ಟದ ಪ್ರಾದೇಶಿಕ ಪರೀಕ್ಷಾ ಮಂಡಲಿಯ ಕಾರ್ಯದರ್ಶಿಗಳಿಗೆ ಬೆಂಗಳೂರು ಮೈಸೂರು, ಕಲ್ಬುರ್ಗಿ ಮತ್ತು ಬೆಳಗಾಂ ವಿಭಾಗರವರಿಗೆ ಮುಂದಿನ ಕ್ರಮಕ್ಕಾಗಿ.
5. ರಾಜ್ಯದ ಸಂಬಂಧಿಸಿದ ಡಯಟ್ ಪ್ರಾಂಶುಪಾಲರುಗಳಿಗೆ ಮುಂದಿನ ಕ್ರಮಕ್ಕಾಗಿ.
6. ರಾಜ್ಯದ ಎಲ್ಲಾ ಡಿ.ಪಿ.ಇಡಿ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಿಗೆ ಸೂಕ್ತ ಕ್ರಮಕ್ಕಾಗಿ.

PDF Scanner ACE Scanner